ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 02–09–2020

# ಪತ್ರಿಕಾ ಪ್ರಕಟಣೆ

## ಸೆಪ್ಟೆಂಬರ್ 21 ರಿಂದ ವಿಧಾನ ಸಭೆ ಅಧಿವೇಶನ

ಬೆಂಗಳೂರು, ಸೆಪ್ಟಂಬರ್ 02(ಕರ್ನಾಟಕ ವಾರ್ತೆ):

15ನೇ ವಿಧಾನಸಭೆಯ ಏಳನೇ ಅಧಿವೇಶನವು ಸೋಮವಾರ, ದಿನಾಂಕ 21ನೇ ಸೆಪ್ಟಂಬರ್ 2020ರಂದು ಬೆಳಿಗ್ಗೆ 11–00 ಗಂಟೆಗೆ ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆಯೆಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

## ದತ್ತು ಸ್ವೀಕಾರ

ಬೆಂಗಳೂರು, ಸೆಪ್ಟಂಬರ್ 02(ಕರ್ನಾಟಕ ವಾರ್ತೆ):

ಸಹಕಾರ ಸಚಿವ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ ಸೋಮಶೇಖರ್ ಇವರು ಶಾರದ–ಜ್ಞಾನಾಕ್ಷಿ ಬಡಾವಣೆಯ ನಿವಾಸಿಗಳಿಂದ ರೂ.2.02 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಆನೆ, ಎರಡು ನವಿಲುಗಳು, ಮಲಬಾರ್ ಜೈಂಟ್ ಅಳಿಲು ಮತ್ತು ನೀಲ್‌ಗಿರಿ ಲಂಗೂರ್ ಪ್ರಾಣಿ ಪಕ್ಷಿಗಳನ್ನು ಒಂದು ವರ್ಷದ ಅವಧಿಗೆ ದತ್ತು ಸ್ವೀಕರಿಸಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬಿ.ಎಂ.ಟಿ.ಸಿ. ಸಂಸ್ಥೆಯ ಸಹಾಯವಾಣಿ ಸಂಖ್ಯೆ ಬದಲಾವಣೆ

**ಬೆಂಗಳೂರು, ಸೆಪ್ಟೆಂಬರ್ 02, ಕರ್ನಾಟಕ ವಾರ್ತೆ :**

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಲಹೆ/ದೂರುಗಳನ್ನು ಹಾಗೂ ಇನ್ನಿತರೆ ಸಂಸ್ಥೆಯ ಮಾಹಿತಿಯನ್ನು ಪ್ರಯಾಣಿಕರಿಗೆ ಒದಗಿಸುವ ಸಲುವಾಗಿ ನೀಡಲಾಗಿದ್ದ ಸಹಾಯವಾಣಿ (ಕಾಲ್ ಸೆಂಟರ್) ಸಂಖ್ಯೆ: 1800–425–1663 ಬದಲಾಗಿದ್ದು, ನೂತನ "ಸಹಾಯವಾಣಿ ಸಂಖ್ಯೆ 080–22483777" ಗೆ ಬದಲಾಗಿರುತ್ತದೆ.**

**ನೂತನ "ಸಹಾಯವಾಣಿ ಸಂಖ್ಯೆ" ಯು ದಿನಾಂಕ: 31–08–2020 ರಿಂದ ಜಾರಿಗೆ ಬಂದಿದ್ದು, ಸದರಿ ಸಹಾಯವಾಣಿಯು ಪ್ರತಿದಿನ ಬೆಳಿಗ್ಗೆ 06:00 ಗಂಟೆಯಿಂದ ರಾತ್ರಿ 10:00 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

# Change in BMTC Help Line Number

Bengaluru, September 2 (Karnataka Information)

Bangaluru Metropolitan Transport Corporation's earlier Helpline (Call Center) number for the provision of public passenger to receive suggestions/complaints and other related information has been changed from 1800-425-1663 to **"080- 22483777".**

Further, the new Helpline number has commenced its functioning w.e.f 31-08-2020 and its working hours are from 06:00 AM to 10:00 PM daily

## **ಬೆಂಗಳೂರು ಜಲಮಂಡಳಿ: ನೀರಿನ ಅದಾಲತ್**

ಬೆಂಗಳೂರು ಜಲಮಂಡಳಿಯು ದಿನಾಂಕ:03.09.2020 ಗುರುವಾರ ದಂದು **ಸಕಾನಿಅ(ಪಶ್ಚಿಮ)-1, (ನೈರುತ್ಯ)-1, (ಆಗ್ನೇಯ-1), (ದಕ್ಷಿಣ-1),( ಪೂರ್ವ-2)-1, ( ಪೂರ್ವ-1)-1 , (ಉತ್ತರ ವಿಲೇಜ್)-2, (ಕೇಂದ್ರ-1) (ವಾಯುವ್ಯ-1) ಮತ್ತು (ವಾಯುವ್ಯ-4)** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತ್ತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸುತ್ತಿದ್ದು, ಅದಾಲತ್ ನಡೆಯುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| **ಉಪವಿಭಾಗದ ಹೆಸರು** | **ವಿಳಾಸ** | **ದೂರವಾಣಿ ಸಂಖ್ಯೆ** |
|---|---|---|
| **(ಪಶ್ಚಿಮ)-1** | ನೆಲಮಹಡಿ, ಅರ್ಕಾವತಿ ಭವನ, 5ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಆರ್.ಪಿ.ಸಿ ಲೇಔಟ್, ವಿಜಯನಗರ 2ನೇ ಹಂತ, ಬೆಂಗಳೂರು-40 | 23500013 |
| **(ನೈರುತ್ಯ)-1** | ದ್ವಾರಕನಾಥ ರಸ್ತೆ, ನ್ಯಾಷನಲ್ ಕಾಲೇಜು ಮುಂಭಾಗ, ವಿ.ವಿ.ಪುರಂ ಬೆಂಗಳೂರು-04 | 22425193 |
| **(ಆಗ್ನೇಯ-1)** | ಸ್ವಾಮಿ ವಿವೇಕಾನಂದ ರಸ್ತೆ, ಆಡೋ ಮಾಲ್ ಎದುರು, ಹಲಸೂರು, ಬೆಂಗಳೂರು-08 | 22945159 |
| **( ದಕ್ಷಿಣ-1)** | ಜಂಬೂಸವಾರಿ ದಿಣ್ಣೆ ಮುಖ್ಯ ರಸ್ತೆ, 8ನೇ ಘಟ್ಟ, ಜೆ.ಪಿ.ನಗರ, ಬೆಂಗಳೂರು-76. | 22945267 |
| **( ಪೂರ್ವ-2)-1** | 1ನೇ ಬ್ಲಾಕ್, 9ನೇ 'ಡಿ' ಮುಖ್ಯ ರಸ್ತೆ, ಸರ್ವಿಸ್ ರಸ್ತೆ, ಹೆಚ್.ಆರ್.ಬಿ.ಆರ್ ಲೇಔಟ್, ಕಲ್ಯಾಣ ನಗರ,ಬೆಂಗಳೂರು-43 | 22945170 |
| **( ಪೂರ್ವ-1)-1** | ಬಿ.ಇ.ಎಂ.ಎಲ್ ಲೇಔಟ್, ಐ.ಟಿ.ಪಿ.ಎಲ್ ಹತ್ತಿರ 4ನೇ ಮುಖ್ಯ ರಸ್ತೆ, ಕುಂದಲಹಳ್ಳಿ ಮುಖ್ಯ ರಸ್ತೆ, ಬೆಂಗಳೂರು-66 | 22945115 |
| **(ಉತ್ತರ ವಿಲೇಜ್)-2** | 1ನೇ ಮಹಡಿ, ಪಿನಾಕಿನಿಭವನ, ದೊಡ್ಡ ಬಳ್ಳಾಪುರರಸ್ತೆ, ಮೇಜರ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ,ಬೆಂಗಳೂರು | 9632029191 |
| **(ಕೇಂದ್ರ-1)** | ನಂ. 17, ಪಾರ್ಕ್ ರೋಡ್, ತುಳಸಿ ತೋಟ, ಚಿಕ್ಕ ಲಾಲ್‌ಬಾಗ್, ಬೆಂಗಳೂರು-53 | 22945188 |
| **(ವಾಯುವ್ಯ-1)** | 1ನೇ 'ಎನ್' ಬ್ಲಾಕ್, 4ನೇ ಅಡ್ಡ ರಸ್ತೆ, ವಿದ್ಯಾವರ್ಧಕ ಶಾಲೆ ಹಿಂಭಾಗ | 22945176 |

| | | |
|---|---|---|
| | (ಕೇತಮಾರನ ಹಳ್ಳಿ ವಾಟರ್ ಟ್ಯಾಂಕ್) ರಾಜಾಜಿನಗರ, ಬೆಂಗಳೂರು-10 | |
| **(ವಾಯುವ್ಯ-4)** | ನೆಲಮಹಡಿ, 7ನೇ ಮುಖ್ಯ ರಸ್ತೆ, ಎಂಇಐ ಲೇಔಟ್, ಹೆಸರಘಟ್ಟ ರಸ್ತೆ. ಬೆಂಗಳೂರು-73 | 28371048 |

**ಮೇಲೆ ತಿಳಿಸಲಾದ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸೇವಾಠಾಣೆಗಳ ವಿವರ ಈ ಕೆಳಕಂಡಂತಿದೆ.**

| **ಉಪವಿಭಾಗದ ಹೆಸರು** | **ಸೇವಾಠಾಣೆಗಳು** |
|---|---|
| **(ಪಶ್ಚಿಮ)-1** | ಮಾಗಡಿ ರಸ್ತೆ-1,2, ಹೊಸಹಳ್ಳಿ ಪಂಪ್ ಹೌಸ್, ಮೈಸೂರು ರಸ್ತೆ, |
| **(ನೈರುತ್ಯ)-1** | ವಿ.ವಿ.ಪುರಂ, ಸುಧಾಮನಗರ-2, ಕೆಂಪೇಗೌಡ ನಗರ, ಜಗಜೀವನ್‌ರಾಮ್ ನಗರ,ಚಾಮರಾಜಪೇಟೆ |
| **(ಆಗ್ನೇಯ-1)** | ಸಿ.ಎಲ್.ಆರ್, ಜಾನ್ಸನ್ ಮಾರ್ಕೆಟ್. |
| **( ದಕ್ಷಿಣ-1)** | ಜೆ.ಪಿ.ನಗರ-2, ಕೊತ್ತನೂರು ದಿಣ್ಣೆ, ಜಂಬೂಸವಾರಿ ದಿಣ್ಣೆ, ವಿಜಯಬ್ಯಾಂಕ್ ಕಾಲೋನಿ, ಅರಕೆರೆ & ಮೈಕೋ ಲೇಔಟ್. |
| **( ಪೂರ್ವ-2)-1** | ಹೆಚ್.ಆರ್.ಬಿ.ಆರ್.ಲೇಔಟ್ & ಹೆಚ್.ಬಿ.ಆರ್ ಲೇಔಟ್,ಕಾಚರಕನಹಳ್ಳಿ, ಕಲ್ಯಾಣನಗರ |
| **( ಪೂರ್ವ-1)-1** | ಎ.ಇ.ಸಿ.ಎಸ್- 1 & 2, ಹೂಡಿ |
| **(ಉತ್ತರ ವಿಲೇಜ್)-2** | ಜಿ.ಕೆ.ವಿ.ಕೆ, ಮಾನ್ಯತಾ ಟೆಕ್ ಪಾರ್ಕ್ |
| **(ಕೇಂದ್ರ-1)** | ಎಲ್.ಎಲ್.ಆರ್, ಚಿಕ್ಕಲಾಲ್‌ಬಾಗ್, ಬನ್ನಪ್ಪ ಪಾರ್ಕ್, ಸುಧಾಮನಗರ-1. |
| **(ವಾಯುವ್ಯ-1)** | ಕೇತಮಾರನಹಳ್ಳಿ, ಮಹಾಲಕ್ಷ್ಮಿ ಲೇಔಟ್, ರಾಜಾಜಿನಗರ- 1, 2, ನಂದಿನಿಲೇಔಟ್-1 |
| **(ವಾಯುವ್ಯ-4)** | ಎಂ.ಇ.ಐ. ಲೇಔಟ್ -1 & 2, ಬಾಹುಬಲಿನಗರ. |

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ. ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ

ಬಳಸಿಕೊಳ್ಳ ಬಹುದಾಗಿದೆ ಹಾಗೂ **ಅನ್‌ಲಾಕ್–4.0** ರಮಾರ್ಗದರ್ಶನದಂತೆ ಸಭೆಗೆ ಹಾಜಾರಾಗಲಿರುವ ಸಂದಂರ್ಭದಲ್ಲಿ ಎಲ್ಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು

**BWSSB:Water Adalath**

BWSSB water Adalath is held on 03.09.2020 in a AEE (West-1), (South West-1), (South East-1), (South-1),(East-2)-1, (East-1)-1, (North Village-2), (Central -1) , (North West-1) and (North West-4) sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting domestic connection to non domestic connection & other related issues. The details of the places where the Adalath is held is as follows.

| Sub-division | Address | Phone Number |
|---|---|---|
| **(West-1)** | Ground floor, Arkavathi Bhavan, 5th Main, 9th cross, RPC Layout, Vijayanagar 2nd Stage,Bangalore-40 | 23500013 |
| **(South West-1)** | Dwarakanath Road, VV Puram, opposite National College,Bangalore-04 | 22425193 |
| **(South East-1)** | Swami Vivekananda Road, Opposite Lido Mall,Halasur, Bangalore-08 | 22945159 |
| **(South-1)** | Jamboosavari Dinne Main Road, JP Nagar 8th phase, Bangalore-76 | 22945267 |
| **(East-2)-1** | 1st Block ,9th ‘D’ Main, Service Road, , HRBR Layout, Kalyan Nagar, Bangalore-43 | 22945170 |
| **(East-1)-1** | BEML Layout, Near ITPL, 4th Main Road, Kundalahalli Main Road, Bangalore-66 | 22945115 |
| **(NorthVillage-2)** | 1st floor, Pinakini Bhavan, Doddaballapura Road, Major Unnikrishnan Road, Yelahanka Bangalore | 9632029191 |

| | | |
|---|---|---|
| **(Central -1)** | No. 17, Park Road, Tulasi Thota, Chikka Lalbagh, Bangalore-53 | 22945188 |
| **(North West-1)** | 4th Cross, Rajajinagar 1st 'N' Block, Behind Vidyavardhaka School (Kethamaranahalli Water Tank), Bangalore-10 | 22945176 |
| **(North West-4)** | Ground Floor, 7th Main, MEI layout, Hesaragatta Road. Bangalore-73 | 28371048 |

**The details of service stations coming under the subdivisions mentioned above are as follows:**

| **Sub-division** | **Service Stations** |
|---|---|
| **(West-1)** | Magadi Road-1 & 2, Hosahalli Pump House, Mysore Road |
| **(South West-1)** | V.VPuram,Sudhamanagara-2 Kempegowda Nagar, Jagajeevanramnagar, Chamarajapet |
| **(South East-1)** | CLR & Jhonson Market |
| **(South-1)** | JP Nagar-2, Kottanoor Dinne, Vijaya Bank colony, Arkere & Mico layout, Jambusavaridinne |
| **(East-2)-1** | HRBR & HBR Layout,Kacharakanahalli, Kalyan nagar |
| **(East-1)-1** | AECS 1 &2, Hoodi |
| **(North Village-2),** | GKVK, Manyatha Tech Park |
| **(Central -1)** | LLR, Chikkalalbagh, Bannappa Park, Sudhamanagar-1 |
| **(North West-1)** | Kethamaranahalli, Mahalakshmi layout, |

| | |
|---|---|
| | Rajajinagar -1&2, Nandini Layout-1 |
| **(North West-4)** | MEI Layout -1 & 2, Bahubalinagar |

For any problems regarding the water supply and all, publics can contact 24x 7 call centre: 22238888, helpline number: 1916 & whats app no: 8762228888. Public can utilize this adalath facilities to solve the problems regarding water supply. public are requested to follow all precautionary measures according to **Unlock-4.0** guidelines while attending the adalath.

# Application Invited

Bengaluru, September 2 (Karnataka Information)

The MCA Programme in Bangalore University has invited applications for 09 full time Guest Lecturers for one year duration. Reservation for 10 guest faculty (According to Roaster point scale as per Government order # ಸಿ ಅಸಂ. ಇ. 08ನೆ ಹಿಮ 95 ದಿನಾ0ಕ 20ನೇ ಜೂನ್ 1995) is: GM – 5(3 Women),SC - 2(1 Women),ST – 1,Cat – 1,2A – 1. The minimum qualification for Guest lecturer is MCA / M.Sc. (Computer Science)/M.Tech Computer Science. Preference will be given to NET / SLET / Ph.D.(Computer Science) qualified candidates. The honorarium is as follows: Rs. 36,000/- for NET or Ph.D. qualified and Rs. 28,000/- for non NET or non Ph.D candidates. For details contact - Coordinator, MCA Programme, Psychology building, Bangalore University, JB Campus, Bangalore-56. (Telephone: 22961453 / 22961454 or email: mca@bub.ernet.in). The candidates can submit their CV on or before 05.09.2020.

# ಅರ್ಜಿ ಆಹ್ವಾನ

**ಬೆಂಗಳೂರು, ಸೆಪ್ಟೆಂಬರ್ 02, (ಕರ್ನಾಟಕ ವಾರ್ತೆ) :**

**ಎಮ್.ಸಿ.ಎ ವಿಭಾಗ, ಬೆ0ಗಳೂರು ವಿಶ್ವವಿದ್ಯಾಲ0ಯವು, ಎಮ್.ಸಿ.ಎ./ ಎಮ್.ಎಸ್.ಸಿ.(ಗಣಕ ವಿಜ್ಞಾನ)/ಎಮ್.ಟೆಕ್(ಗಣಕ ವಿಜ್ಞಾನ) ಪದವೀಧರರಿ0ದ 10 ಅತಿಥಿ ಉಪನ್ಯಾಸಕರ ಹುದ್ದೆಗಳಿಗಾಗಿ ಒ0ದು ವರ್ಷದ ಅವಧಿಗೆ ಕಾ0ರ್ಯ ನಿರ್ವಹಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮೀಸಲಾತಿ ಪ್ರಕಾರ – (ರೋಸ್ಟರ್ ಪದ್ಧತಿ ಅಡಿಯಲ್ಲಿ, ಸರ್ಕಾರದ ಆದೇಶದ ಸ0ಖ್ಯೆ – ಅಸಂ. ಇ. 08ನೆ ಹಿಮ 95 ದಿನಾ0ಕ 20ನೇ ಜೂನ್ 1995 ಪ್ರಕಾರ ): ಉಜ – 5(3 ಘಾಂಟಜಟಿ), ಖಅ – 2(1 ಘಾಂಟಜಟಿ),ಖಖ – 1, ಅಚಿಣ ಖ – 1, 2೦ – 1. ಎನ್ ಇ ಟಿ /ಎಸ್ ಎಲ್ ಇ ಟಿ ಮತ್ತು ಪಿಎಚ್.ಡಿ (ಗಣಕ ವಿಜ್ಞಾನ) ಆದವರಿಗೆ ಆದ್ಯತೆ ಕೊಡಲಾಗುವುದು. ಅಭ್ಯರ್ಥಿಗಳಿಗೆ ಗೌರವಧನವು ಈ ಪ್ರಕಾರವಾಗಿದೆ: ರೂ. 36,000/– ಎನ್ ಇ ಟಿ ಮತ್ತು ಪಿಎಚ್.ಡಿ /ಎಸ್ ಎಲ್ ಇ ಟಿ ಆದವರಿಗೆ ಮತ್ತು ರೂ. 28,000/– ಎನ್ ಇ ಟಿ /ಎಸ್ ಎಲ್ ಇ ಟಿ ಮತ್ತು ಪಿಎಚ್.ಡಿ ಇಲ್ಲದವರಿಗೆ. ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ದಿನಾ0ಕ: 05.09.2020 ರೊಳಗೆ ಸಲ್ಲಿಸತಕ್ಕದ್ದು. ಅಭ್ಯರ್ಥಿಗಳು ವಿವರಗಳಿಗೆ ಈ ವಿಳಾಸವನ್ನು ಸ0ಪರ್ಕಿಸಬಹುದಾಗಿದೆ: ಸಮನ್ವ0ಯಾಧಿಕಾರಿ, ಎಮ್.ಸಿ.ಎ. ವಿಭಾಗ, ಸೈಕಾಲಜಿ ಕಟ್ಟಡ, ಜ್ಞಾನಭಾರತಿ ಆವರಣ, ಬೆ0ಗಳೂರು ವಿಶ್ವವಿದ್ಯಾಲ0ಯ, ಬೆ0ಗಳೂರು –** 56.**Telephone: 22961453 / 22961454 email: mca@bub.ernet.in**

## ಕೈಗಾರಿಕಾ ತರಬೇತಿ ಸಂಸ್ಥೆಯ ವಿವಿಧ ವೃತ್ತಿಗಳ ತರಬೇತಿಗೆ ಅರ್ಜಿ ಆಹ್ವಾನ

**ಬೆಂಗಳೂರು, ಸೆಪ್ಟೆಂಬರ್ 02, ಕರ್ನಾಟಕ ವಾರ್ತೆ :**

**2020–21ನೇ ಸಾಲಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ವಿವಿಧ ವೃತ್ತಿಗಳಲ್ಲಿ ತರಬೇತಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

**ಆಗಸ್ಟ್ 2020ನೇ ಸಾಲಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಡೈರಿ ವೃತ್ತ, ಹೊಸೂರು ರಸ್ತೆ, ಬೆಂಗಳೂರು–29 ಇಲ್ಲಿ ವಿವಿಧ ವೃತ್ತಿಗಳಲ್ಲಿ ತರಬೇತಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.**

**ಅಭ್ಯರ್ಥಿಗಳು www.emptrg.kar.nic.in ಮುಖಾಂತರ ಸೆಪ್ಟೆಂಬರ್ 10 ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ(ಪು), ಹೊಸೂರು ರಸ್ತೆ, ಬೆಂಗಳೂರು–29 ಇವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.**

# ಸರ್ವೋತ್ತಮ ಸೇವಾ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**ಬೆಂಗಳೂರು, ಸೆಪ್ಟೆಂಬರ್ 02, ಕರ್ನಾಟಕ ವಾರ್ತೆ :**

**ರಾಜ್ಯ ಸರ್ಕಾರದ ಅಧಿಕಾರಿ–ನೌಕರರಿಗೆ 2020–21ನೇ ಸಾಲಿನಲ್ಲಿ ಜಿಲ್ಲಾ, ಇಲಾಖಾ ಮತ್ತು ರಾಜ್ಯ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿಗಾಗಿ ಆನ್ ಲೈನ್ ಮೂಲಕ ನಾಮನಿರ್ದೇಶನ ಸಲ್ಲಿಸಬಹುದು.**

**ನಾಮನಿರ್ದೇಶನ ಸಲ್ಲಿಸ ಬಯಸುವವರು ಜಾಲತಾಣ https://dparar.karnataka.gov.in/ ಅಥವಾ Chttps://sarvothamaawards.karnataka.gov.in/ ರ ಮೂಲಕ ಅಕ್ಟೋಬರ್ 31 ರೊಳಗಾಗಿ ಸಲ್ಲಿಸಬೇಕು.**

**ಜಾಲತಾಣದಲ್ಲಿ ಮಾಹಿತಿ–ವಿವರಗಳನ್ನು ದಾಖಲಿಸಲು ಯಾವುದೇ ರೀತಿಯ ಅಡಚಣೆ ಉಂಟಾದಲ್ಲಿ ಹೆಚ್ಚಿನ ಮಾಹಿತಿಗಾಗಿ ಹೆಲ್ಪ್ ಡೆಸ್ಕ್‌ಗೆ ಮೊ.ಸಂ: 9164500669 ಅಥವಾ, ದೂರವಾಣಿ ಸಂಖ್ಯೆ :080–22230060 ನ್ನು ಸಂಪಕಿಸಬಹುದು.**

# ಸ್ಥಾನಪನ್ನ ಮುಂಬಡ್ತಿ

**ಬೆಂಗಳೂರು, ಸೆಪ್ಟೆಂಬರ್ 02, (ಕರ್ನಾಟಕ ವಾರ್ತೆ) :**

**ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಿ. ಸತೀಶ್, ಸಹಾಯಕ ನಿರ್ದೇಶಕರು, ವಾಹನ ವಿಭಾಗ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು ಇವರಿಗೆ ವಿಮಾ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಉಪ ನಿರ್ದೇಶಕರು–1 ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ ನೇಮಕ ಮಾಡಲಾಗಿದೆ.**

**ಛಾಯಾಚಿತ್ರ ಲಗತ್ತಿಸಿದೆ)**

# ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೈಸೂರು ಮಾರ್ಗದಲ್ಲಿ ಫ್ಲೈಬಸ್ ಸಾರಿಗೆಗಳನ್ನು ಕಾರ್ಯಾಚರಣೆ

**ಬೆಂಗಳೂರು, ಸೆಪ್ಟೆಂಬರ್ 02, (ಕರ್ನಾಟಕ ವಾರ್ತೆ) :**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೈಸೂರಿಗೆ ಫ್ಲೈ ಬಸ್ ಸಾರಿಗೆಗಳನ್ನು ದಿನಾಂಕ 01/09/2020 ಈ ಕೆಳಕಂಡ ವೇಳಾಪಟ್ಟಿಯಂತೆ

ಕಾರ್ಯಾಚರಣೆ ಮಾಡಲಾಗುತ್ತದೆ.

**ವೇಳಾ ಪಟ್ಟಿ ಮತ್ತು ಪ್ರಯಾಣದ ದರದ ವಿವರಗಳು**

**ಬೆಂಗಳೂರು–ಮೈಸೂರು**

| ಮಾರ್ಗ | ಪ್ರಾರಂಭಿಕ ದಿನಾಂಕ | ಪ್ರಯಾಣ ದರ ವಯಸ್ಕರು ರೂ. ಪೈಸೆ | ಕೆ.ಐ.ಎ.ಎಲ್ ನಿಂದ ಹೊರಡುವ ಸಮಯ | ಮೈಸೂರು ತಲುಪುವ ಸಮಯ | ಮೈಸೂರಿನಿಂದ ಹೊರಡುವ ಸಮಯ | ಕೆ.ಐ.ಎ.ಎಲ್ ತಲುಪುವ ಸಮಯ |
|---|---|---|---|---|---|---|
| ಬೆಂಗಳೂರು–ಮೈಸೂರು | 10/09/2020 | 750=00 | 0930, 1130, 1830, 2030 | 1330, 1530, 2230 | 0400, 1400, 1600 | 0800, 1800, 2000 |

Karnataka State Road Transport Corporation is planned to introduce Fly bus services for the convenience of the travelling public on the route : KIAL to Mysuru and back w.e.f 10/09/2020. The Ticket fare and time table is furnished below:-

**KIAL-Mysuru**

| Destination | Date of Introduction | Passenger Fare | Departure time from KIAL | Arrival at end place | Departure time from end place | Arrival at KIAL |
|---|---|---|---|---|---|---|
| BNG- Mysuru | 10/09/2020 | 750=00 | 0930, 1130, 1830, 2030 | 1330, 1530, 2230, 0030 | 0400, 1400, 1600, 0015 | 0800, 1800, 2000, 0400 |

# ಸಚಿವ ಸುರೇಶ್ ಕುಮಾರ್ ಭರವಸೆ: ಧರಣಿ ಕೈಬಿಟ್ಟ ಪರಿಷತ್ ಸದಸ್ಯರು

**ಬೆಂಗಳೂರು, ಸೆಪ್ಟೆಂಬರ್ 02, (ಕರ್ನಾಟಕ ವಾರ್ತೆ) :**

ಬೆಂಗಳೂರು: ಮೈಸೂರು ವಿಭಾಗದಲ್ಲಿ ಪ್ರೌಢ ಶಾಲಾ ಗ್ರೇಡ್–2 ಸಹ ಶಿಕ್ಷಕರಿಂದ ಮುಖ್ಯೋಪಾಧ್ಯಾಯ ಹುದ್ದೆಗೆ ಬಡ್ತಿ ನೀಡುವುದು ಸೇರಿದಂತೆ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಹಲವಾರು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಶಿಕ್ಷಣ ಸಚಿವರ ಕಚೇರಿ ಎದರು ನಡೆಸಲುದ್ದೇಶಿಸಿದ್ದ ಧರಣಿಯನ್ನು ವಿಧಾನಪರಿಷತ್ ಸದಸ್ಯರು ವಾಪಸು ಪಡೆದಿದ್ದಾರೆ.

ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಹಲವಾರು ಬೇಡಿಕೆಗಳ ಕುರಿತಂತೆ ಬುಧವಾರ ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಎಸ್. ಎಲ್. ಭೋಜೆಗೌಡ ಮತ್ತು ರಮೇಶ್ ಗೌಡ ಅವರೊಂದಿಗೆ ಸಭೆ ನಡೆಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್, ಕಾಲಮಿತಿಯಲ್ಲಿ ಅನುಷ್ಠಾನಯೋಗ್ಯ ಬೇಡಿಕೆಗಳನ್ನು ಈಡೇರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ಮೈಸೂರು ವಿಭಾಗದಲ್ಲಿ **ಪ್ರೌಢ ಶಾಲಾ ಗ್ರೇಡ್-2** ಸಹ ಶಿಕ್ಷಕರಿಂದ ಮುಖ್ಯೋಪಾಧ್ಯಾಯ ಹುದ್ದೆಗೆ ಬಡ್ತಿ ನೀಡುವ ಸಂಬಂಧದಲ್ಲಿ ಸೆ. 9 ರೊಳಗೆ ಡಿಪಿಸಿ ನಡೆಸಿ ಸೆ.15 ರೊಳಗೆ ಕೌನ್ಸೆಲಿಂಗ್ ನಡೆಸಿ ಬಡ್ತಿ ಪ್ರಕ್ರಿಯೆ ಪೂರ್ಣಗೊಳಿಸಲು ಸುರೇಶ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು. ಬಡ್ತಿಯಲ್ಲಿನ ಲೋಪಗಳನ್ನು ಸರಿಪಡಿಸಲು ಪ್ರತಿ ವರ್ಷ ಸಹ ಶಿಕ್ಷಕ ವೃಂದದಿಂದ ಮುಖ್ಯೋಪಾಧ್ಯಾಯ ಹುದ್ದೆಗೆ ಬಡ್ತಿ ಪ್ರಕ್ರಿಯೆಯನ್ನು ಅಗತ್ಯವಾಗಿ ಕೈಗೆತ್ತಿಕೊಳ್ಳಲು ಸಚಿವರು ಸೂಚನೆ ನೀಡಿದರು.

ಆರ್.ಟಿ.ಇ. ಶುಲ್ಕ ಮರುಪಾವತಿಸಲು 2020-21ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದಲ್ಲಿ ಪ್ರಥಮ ಕಂತಿನಲ್ಲಿ ಬಿಡುಗಡೆಯಾಗಿದ್ದ 275 ಕೋಟಿ ರೂ. ಅನುದಾನವನ್ನು ಈಗಾಗಲೇ ಶಾಲೆಗಳಿಗೆ ನೀಡಲಾಗಿದೆ. ಬಾಕಿಯಿರುವ 275 ಕೋಟಿ ರೂ. ಬಿಡುಗಡೆಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಹಣ ಬಿಡುಗಡೆಯಾದ ತಕ್ಷಣವೇ ಶಾಲೆಗಳಿಗೆ ಆರ್.ಟಿ.ಇ. ಶುಲ್ಕ ಬಾಕಿಯನ್ನು ನೀಡಲಾಗುವುದೆಂದು ಅವರು ತಿಳಿಸಿದರು.

ಖಾಸಗಿ ಶಿಕ್ಷಣ ಸಂಸ್ಥೆಗಳು ದಾಖಲಾತಿ ಪ್ರಕ್ರಿಯೆಗೆ ಅನುಗುಣವಾಗಿ ಹಂತಹಂತವಾಗಿ ಪಠ್ಯಪುಸ್ತಕಗಳನ್ನು ಖರೀದಿಸಲು ಅವಕಾಶ ಕಲ್ಪಿಸುವುದು, 2019-20ನೇ ಸಾಲಿನ ಆರ್.ಟಿ.ಇ ಬಾಕಿ ಮೊತ್ತ ಕೂಡಲೇ ಪಾವತಿಸಲು ಕ್ರಮ ವಹಿಸುವುದು, ಹಳೆಯ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಹೊಸ ಶಾಲೆಗಳಿಗೆ ವಿಧಿಸುತ್ತಿರುವ 2 ಲಕ್ಷ ರೂ. ಠೇವಣಿ

ನೀಡಬೇಕೆಂಬ ನಿಯಮವನ್ನು ಕೈಬಿಡುವುದು ಸೇರಿದಂತೆ ಹಲವಾರು ಬೇಡಿಕೆಗಳನ್ನು ಈಡೇರಿಸಬೇಕೆಂದು ಸದಸ್ಯರು ಒತ್ತಾಯಿಸಿದರು.

ಎಲ್ಲ ಬೇಡಿಕೆಗಳನ್ನು ಸಾವಕಾಶವಾಗಿ ಕೇಳಿಸಿಕೊಂಡ ಸಚಿವರು, ಹಾಜರಿದ್ದ ಇಲಾಖೆಯ ಅಧಿಕಾರಿಗಳೊಂದಿಗೆ ಬೇಡಿಕೆಗಳ ಸಾಧಕ–ಬಾಧಕಗಳು ಕುರಿತಂತೆ ಚರ್ಚೆ ನಡೆಸಿದರು. ಅನುಷ್ಠಾನಯೋಗ್ಯ ಬೇಡಿಕೆಗಳನ್ನು ಕಾಲಮಿತಿಯಲ್ಲಿ ಈಡೇರಿಸಲು ಕ್ರಮ ವಹಿಸಲಾಗುವುದೆಂದು ಸುರೇಶ್ ಕುಮಾರ್ ಭರವಸೆ ನೀಡಿದರು. ಸಚಿವರ ಭರವಸೆಯ ನಂತರ ಸದಸ್ಯರು ಧರಣಿ ಪ್ರಸ್ತಾಪ ಕೈಬಿಟ್ಟಿದ್ದಾರೆ.

ಈ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಶಿಕ್ಷಣ ಸಚಿವರ ಕಚೇರಿ ಎದರು ಧರಣಿ ನಡೆಸುವ ವಿಚಾರವನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಸಭೆಯಲ್ಲಿ ಪ್ರಕಟಿಸಿದರು.

ಸಭೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಹಾಜರಿದ್ದರು.

## ಬ್ಯಾಂಕಿಂಗ್ ಹುದ್ದೆಗಳ ಆನ್‌ಲೈನ್ ತರಬೇತಿ

**ಬೆಂಗಳೂರು, ಸೆಪ್ಟೆಂಬರ್ 02, (ಕರ್ನಾಟಕ ವಾರ್ತೆ) :**

ಕರ್ನಾಟಕ ರಾಜ್ಯಮುಕ್ತವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವು ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿ ಪರೀಕ್ಷೆಗಳಿಗೆ ಆಯೋಜಿಸಿರುವ 50 ದಿನಗಳ ಆನ್ಲೈನ್ ತರಬೇತಿ ಶಿಬಿರದ ಉದ್ಘಾಟನೆಯನ್ನು ದಿನಾಂಕ:05.09.2020 ರ ಶನಿವಾರ 11 ಗಂಟೆಗೆ ಲೋಕಸಭಾ ಸದಸ್ಯ ಪ್ರತಾಪಸಿಂಹ ಅವರು ಆನ್ಲೈನ್ ನಲ್ಲಿ ನೆರವೇರಿಸಿ ತರಬೇತಿ ಶಿಬಿರಾರ್ಥಿಗಳಿಗೆ ಶುಭಹಾರೈಸುವರು. ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಅಧ್ಯಕ್ಷತೆ ವಹಿಸುವರು. ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ಐದು ವಿವಿಧ ಬ್ಯಾಂಕ್ ಹುದ್ದೆಗಳಿಗೆ ಒಮ್ಮೆಲೆ ಆಯ್ಕೆಯಾಗಿ, ಪ್ರಸ್ತುತ ಕೆ.ಎ.ಎಸ್ ಅಧಿಕಾರಿಗಳಾಗಿರುವ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮೈಸೂರು-ಮಡಿಕೇರಿ ವಿಭಾಗದ ವಿಶೇಷ ಭೂ ಸ್ವಾಧೀನಾಧಿಕಾರಿ ಹಾಗು ಸಕ್ಷಮ ಪ್ರಾಧಿಕಾರದ

ಎ.ದೇವರಾಜು ಮತ್ತು ದಾವಣಗೆರೆ ಸ್ಮಾರ್ಟ್ ಸಿಟಿಯ ಎಂ ಡಿ ಮತ್ತು ಸಿಇಒ ಆಶಾದ್ ಆರ್ ಷರೀಫ್ ಮುಖ್ಯ ಅತಿಥಿಗಳಾಗಿ ಭಾಗಿಯಾಗುವರು. ಕುಲಸಚಿವ ಪ್ರೊ.ಲಿಂಗರಾಜ ಗಾಂಧಿ ಉಪಸ್ಥಿತರಿರುವರು. ಈ ತರಬೇತಿಗೆ ಸೇರಬಯಸುವ ಅಭ್ಯರ್ಥಿಗಳು **0821-2515944** ಸಂಪರ್ಕಿಸಬಹುದೆಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.